# ಬೋರ್ನ ಕಾಯಿಲೆ

## ಮನೋವೈದ್ಯರಿಗೆ ಸವಾಲಾಗಿರುವ ಪಶುಜನ್ಯ ರೋಗ



**ಪ್ರಾಣಿಗಳಿಂದ ಮನುಷ್ಯರಿಗೆ ವೈರಾಣು ಸೋಂಕು ಮೂಲಕ ಹರಡುವ ಬೋರ್ನ ಕಾಯಿಲೆ ವ್ಯಕ್ತಿಯ ನರಮಂಡಲಕ್ಕೆ ಹಾನಿ ಮಾಡುತ್ತದೆ. ಮೆದುಳನ್ನೂ ಗಾಸಿಗೊಳಿಸಿದ ಬಳಿಕ ಇಡೀ ಶರೀರವನ್ನು ಆವರಿಸುವ ಈ ಸೋಂಕಿಗೆ ಚಿಕಿತ್ಸೆ ಮನೋವೈದ್ಯರಿಗೂ ಸವಾಲೆನಿಸಿದೆ.**

■ ಡಾ.ಎಂ. ಸತ್ಯನಾರಾಯಣ ರಾವ್

ಬೋರ್ನ ಕಾಯಿಲೆ! ಮನುಷ್ಯರಲ್ಲಿ ಹೊಸದಾಗಿ ಕಾಣಿಸಿಕೊಳ್ಳುತ್ತಿರುವ ಪಶುಜನ್ಯ ಕಾಯಿಲೆಯಿದು. ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ವೈರಾಣು ಸೋಂಕು. ಇದೊಂದು ಮನುಷ್ಯರ ಮಾರಕ ನರಮಂಡಲ ಕಾಯಿಲೆ. ಈಗಾಗಲೇ ಮನುಷ್ಯರ ಮೆದುಳನ್ನು ತಾರುಮಾರು ಮಾಡಿದೆ. ಮುಂದೆ ಮತ್ತಷ್ಟು ಸುದ್ದಿ ಮಾಡಲಿರುವ ಕಾಯಿಲೆಯೇ ಬೋರ್ನ ಕಾಯಿಲೆ. ಇದು ಮನೋವೈದ್ಯರಿಗೂ ಸವಾಲು!

ಮನುಷ್ಯರಲ್ಲೂ ಸೇರಿದಂತೆ ಎಲ್ಲಾ ಪ್ರಾಣಿಗಳಲ್ಲೂ ನರಗಳ ಮೂಲಕ ವಿಶೇಷವಾಗಿ ಮೂಗು, ಬಾಯಿ, ಗಂಟಲು, ಕರುಳು ನರತುದಿಗಳ ಮೂಲಕ ಬೋರ್ನ ಕಾಯಿಲೆ ವೈರಾಣು ಪ್ರವೇಶ ಮಾಡಿ ಅವುಗಳಲ್ಲೇ ಸಾಗಿ ಕೇಂದ್ರ ನರಮಂಡಲ ತಲುಪುತ್ತವೆ. ನರಕೋಶಗಳನ್ನು ಹಾಳು ಮಾಡುತ್ತವೆ. ಮೆದುಳು ನರಕೋಶಗಳಲ್ಲಿ ವೃದ್ಧಿಯಾಗಿ ನಂತರ ಅಲ್ಲಿಂದ ನರಗಳ ಮೂಲಕವೇ ಶರೀರದ ಎಲ್ಲಾ ಭಾಗಗಳಿಗೂ ಇಳಿಯುತ್ತವೆ.

### ಸೋಂಕು ಪ್ರಸಾರ

ಸ್ಪಷ್ಟ ಕಾಯಿಲೆ ಪ್ರಾಣಿಗಳು, ಅಸ್ಪಷ್ಟ ಕಾಯಿಲೆ ಪ್ರಾಣಿಗಳು ಹಾಗು ಸೋಂಕು ವಾಹಕ ಪ್ರಾಣಿಗಳ ಎಂಜಲು, ಮೂಗು ಸೋರಿಕೆ, ಕಣ್ಣೀರು ಮುಂತಾದವುಗಳಲ್ಲಿ ವೈರಾಣುಗಳಿರುತ್ತವೆ. ಇವುಗಳ ಮೂಲಕ ಮನುಷ್ಯರಿಗೂ, ಇತರ ಪ್ರಾಣಿಗಳಿಗೂ ಸೋಂಕು ಹರಡುತ್ತದೆ. ಗಾಳಿಯಲ್ಲಿರುವ ಸೋಂಕು ಕಲುಷಿತ ಹನಿ ಬಿಂದುಗಳಿಂದಲೂ ಕಾಯಿಲೆ ಹರಡುವ ಸಾಧ್ಯತೆ ಇರುತ್ತದೆ. ಸೋಂಕು ಕಲುಷಿತ ಆಹಾರ, ನೀರಿನಿಂದಲೂ ಸೋಂಕು ಹರಡಬಹುದು. ಸೋಂಕು ಪ್ರಾಣಿಗಳ ನೇರ ಸಂಪರ್ಕದಿಂದಲೂ ಮನುಷ್ಯರಿಗೆ ಬೋರ್ನ ಕಾಯಿಲೆ ಹರಡಬಹುದು. ಕೀಟಗಳ ಕಡಿತದ ಮೂಲಕವೂ ಸೋಂಕು ಹರಡಬಹುದು.

ಬೋರ್ನ ಕಾಯಿಲೆ ಬಂದರೆ ಮನುಷ್ಯರಿಗೆ ವ್ಯಾಕ್ಸಿನ್ ಲಭ್ಯವಿಲ್ಲ. ಇಲಿಗಳಲ್ಲಿ ವ್ಯಾಕ್ಸಿನ್ ಸಂಶೋಧನೆ ನಡೆಯುತ್ತಿದೆ.

### ಸುದೀರ್ಘ ಇತಿಹಾಸ

ಬೋರ್ನ ಕಾಯಿಲೆಯ ಮೊಟ್ಟಮೊದಲ ಪ್ರಕರಣ 1885ರಲ್ಲಿ ಪತ್ತೆಯಾಗಿತ್ತು, ಜರ್ಮನಿಯ ಸ್ಯಾಕ್ಸೋನಿ ರಾಜ್ಯದ ಬೋರ್ನ ಪಟ್ಟಣದಲ್ಲಿ ಕುದುರೆಗಳಲ್ಲಿ ವಿಚಿತ್ರ, ಅಪರಿಚಿತ ಕಾಯಿಲೆಯೊಂದು ವ್ಯಾಪಕವಾಗಿ ಕಾಣಿಸಿಕೊಂಡಿತು! ಕುದುರೆಗಳು ಚಿತ್ರ ವಿಚಿತ್ರವಾಗಿ ವರ್ತಿಸತೊಡಗಿದವು. ಅಧಿಕ ಸಂಖ್ಯೆಯಲ್ಲಿ ಕುದುರೆಗಳು ಕಾಯಿಲೆಯಿಂದ ಸತ್ತವು. ಸ್ಥಳೀಯರು ಈ ಕಾಯಿಲೆಗೆ 'ಹೀಟೆಡ್ ಹೆಡ್ ಡಿಸೀಸ್' ಎಂದು ಹೆಸರಿಟ್ಟರು. ಕುದುರೆಗಳಿಗೆ ಹುಚ್ಚು ಎಂದರು. ಕುದುರೆಗಳಿಗೆ ತಲೆಬಿಸಿ, ಮೆದುಳು ಬೇನೆ ಎಂದರು.

ಕೆಲವರು 'ಸ್ಯಾಡ್ ಹಾರ್ಸ್ ಡಿಸೀಸ್' ಎಂದು ಹೆಸರಿಟ್ಟರು. ಕುದುರೆಗಳಿಗೆ ಖಿನ್ನತೆ ಕಾಯಿಲೆ

## ಲಕ್ಷಣಗಳೇನು?

### ಮನುಷ್ಯರಲ್ಲಿ...

ಕಾಯಿಲೆ ಸೋಂಕಿದ ನಾಲ್ಕು ವಾರಗಳ ನಂತರ ಮನುಷ್ಯರಲ್ಲಿ ರೋಗಲಕ್ಷಣಗಳು ಕಾಣಿಸಿಕೊಳ್ಳಲು ಆರಂಭವಾಗುತ್ತವೆ. ಮೆದುಳುಬೇನೆ. ಜ್ವರ, ಬೆಚ್ಚಗಿನ ಮೈ, ಮುಂಗೋಪ, ಜಗಳಗಂಟಿತನ, ವರ್ತನೆಯಲ್ಲಿ ಏರುಪೇರು. ತಲೆನೋವು, ಮಾನಸಿಕ ಖಿನ್ನತೆ, ಮಾನಸಿಕ ಗೊಂದಲ, ಭಾವೋದ್ರೇಕ, ದ್ವಂದ್ವ ವ್ಯಕ್ತಿತ್ವ, ತೊದಲು ಮಾತು, ಅಂಗಾಂಗಗಳ ಮೇಲೆ ಹಿಡಿತ ಇಲ್ಲ, ನಡಿಗೆ ಅಡ್ಡಾದಿಡ್ಡಿ, ತೂರಾಟ, ವಕ್ರ ದೃಷ್ಟಿ, ಭಯ ಹುಟ್ಟಿಸುವ ಕಣ್ಣುಗುಡ್ಡೆ ಹೊರಳಾಟ, ಕಣ್ಣು ಕುರುಡು. ಸಮನ್ವಯತೆ ಇಲ್ಲದ ಸ್ನಾಯುಕ್ರಿಯೆ, ಬುದ್ಧಿಭ್ರಮಣೆ, ಮನೋರೋಗ, ಪಾರ್ಶ್ವವಾಯು ಮುಂತಾದ ಲಕ್ಷಣಗಳನ್ನು ಈ ಕಾಯಿಲೆ ಹೊಂದಿದೆ.

ಮನುಷ್ಯರಲ್ಲಿ ರಕ್ತ ಸೀರಂ ಪರೀಕ್ಷೆ ನಡೆಸಿದಾಗ ದೊರೆತ ಬೋರ್ನ ಕಾಯಿಲೆಯ ಕುರುಹು ಮೊದಲ ಬಾರಿಗೆ 1980ರಲ್ಲಿ ಕಂಡುಬಂತು. ಮನೋರೋಗಿಗಳಲ್ಲಿ ಬೋರ್ನ ಕಾಯಿಲೆ ವೈರಾಣು ಪತ್ತೆಯಾಗಿದೆ. ವಿಜ್ಞಾನಿಗಳು ಬೋರ್ನ ಕಾಯಿಲೆಗೂ ರೋಗಿಗಳ ಮನೋರೋಗಕ್ಕೂ ಸಂಬಂಧ ಹಾಗೂ ಆಧಾರವನ್ನು ನಿರೂಪಿಸಿದ್ದಾರೆ.